# ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಮೈಸೂರು ಉಪವಿಭಾಗ, ಮೈಸೂರು

**ಪ್ರಕರಣ ಸಂಖ್ಯೆ: ಆರ್.ಎ:499/2023** **ದಿನಾಂಕ:25.01.2024**

**ಉಪಸ್ಥಿತರು:-** **ಶ್ರೀ ರಕ್ಷಿತ್.ಕೆ.ಆರ್, ಕೆ.ಎ.ಎಸ್**
**ಉಪವಿಭಾಗಾಧಿಕಾರಿ,**
**ಮೈಸೂರು ಉಪವಿಭಾಗ, ಮೈಸೂರು.**

**<u>ಮೇಲ್ಮನವಿದಾರರು</u>**

ಬಸವಣ್ಣಬಿನ್ ಲೇಟ್ ಕೆಂಪನಂಜೇಗೌಡ ಮರೀಗೌಡನಹುಂಡಿ ಗ್ರಾಮ ವರುಣ ಹೋಬಳಿ, ಮೈಸೂರು ತಾಲ್ಲೂಕು
ಮೇಲ್ಮನವಿದಾರರ ಪರ ವಕೀಲರು
ಎಸ್.ಸಂತೋಷ್‌ಕುಮಾರ್
ಚಿಕ್ಕಹಳ್ಳಿ, ಗ್ರಾಮ, ವರುಣ ಹೋಬಳಿ, ಮೈಸೂರು ತಾಲ್ಲೂಕು.

**<u>ಎದುರುದಾರರು</u>**

1. ತಹಸೀಲ್ದಾರ್ ಮೈಸೂರು ತಾಲ್ಲೂಕು, ಮೈಸೂರು.
2. ಮಹದೇವ ಬಿನ್ ಮರಿದಾಸೇಗೌಡ ಆಯರಹಳ್ಳಿ, ಗ್ರಾಮ, ವರುಣ ಹೋಬಳಿ, ಮೈಸೂರು ತಾಲ್ಲೂಕು.

**<u>ಪ್ರಕರಣದ ಸಂಕ್ಷಿಪ್ತ ವಿವರಣೆ</u>**

ಮೇಲ್ಮನವಿದಾರರು ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 136(2) ರಡಿ ಮೈಸೂರು ತಾಲ್ಲೂಕು, ವರುಣ ಹೋಬಳಿ, ಆಯರಹಳ್ಳಿ ಗ್ರಾಮದ ಸ.ನಂ 421/2 ರಲ್ಲಿ 1-11 ಎಕರೆ ಜಮೀನು ಮೂಲತಃ ಮೇಲ್ಮನವಿದಾರರ ಮುತ್ತಾತ ಲೇಟ್ ಜವನ@ ಜವನಯ್ಯ ರವರಿಗೆ ಸೇರಿದ ಸ್ವತ್ತಾಗಿದ್ದು. ಸದರಿ ಜವನ @ ಜವನಯ್ಯ ರವರು ದಿನಾಂಕ:04.06.1945 ರಂದು ಆಯರಹಳ್ಳಿ ಗ್ರಾಮದ ಕೆಂಪಮ್ಮ ಎಂಬುವವರಿಗೆ ನೊಂದಣಿ ದಸ್ತಾವೇಜು ಸಂಖ್ಯೆ 6389 ರಂತೆ ಭೋಗ್ಯವನ್ನು ನೊಂದಾಯಿಸಲ್ಪಟ್ಟಿದ್ದು ಯಾರಿಗೂ ಸ್ವತ್ತನ್ನು ಕ್ರಯಕ್ಕೆ ನೀಡಿರುವುದಿಲ್ಲ. ಕೈಬರವಣಿಗೆ ಪಹಣಿಯಲ್ಲಿ ಲೇಟ್ ಜವನ ರವರ ಜೊತೆ ಪುಟ್ಟಮ್ಮ ಕೋಂ ಮರಿದಾಸೇಗೌಡ ಹೆಸರು ಸಹಾ ಜಂಟಿಯಾಗಿ ಬಂದಿರುತ್ತದೆ. ಆದರೆ ಸದರಿ ಆಸ್ತಿಯು ಮರಿದಾಸೇಗೌಡ ರವರಿಂದ 2ನೇ ಎದುರುದಾರರಿಗೆ ಎಂ.ಆರ್.ನಂ:162/2006-07 ರಂತೆ ಖಾತೆಯಾಗಿದ್ದು, 2ನೇ ಎದುರುದಾರರಿಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿಗಳಿರುವುದಿಲ್ಲ. ಆದ್ದರಿಂದ ಪ್ರಶ್ನಿತ ಸ್ವತ್ತಿಗೆ ಸಂಬಂದಿಸಿದಂತೆ ಮೇಲ್ಮನವಿದಾರರ ತಾತ ಲೇಟ್ ಜವನ @ಜವನಯ್ಯ ರವರ ಹೆಸರನ್ನು ಆರ್.ಟಿ.ಸಿ ಕಾಲಂ 9 ರಲ್ಲಿ ನಮೂದಿಸಿ ಕಾಲಂ 11 ರಲ್ಲಿ ಭೋಗ್ಯದಾರರಾದ ಕೆಂಪಮ್ಮ ನವರ ಹೆಸರನ್ನು ನಮೂದಿಸಿ ಲೇಟ್ ಜವನ ರವರ ಪೌತಿ ಸಬೂಬು ಅವರ ವಾರಸುದಾರರಾದ ಮೇಲ್ಮನವಿದಾರರಿಗೆ ಖಾತೆ ಬದಲಾವಣೆ ಮಾಡುವಂತೆ 1ನೇ ಎದುರುದಾರರಾದ ತಹಸೀಲ್ದಾರ್ ಮೈಸೂರುರವರಿಗೆ ನಿರ್ದೇಶನವನ್ನು ನೀಡುವಂತೆ

ಕೋರಿ ಕಾಲ ಪರಿಮಿತಿ ಕಾಯಿದೆ ಕಲಂ 5 ರಡಿ ಕಾಲವಿಳಂಭ ಮನ್ನದ ಕೋರಿಕೆಯೊಂದಿಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಅದರಂತೆ ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಎದುರುದಾರರಿಗೆ ಅಂಚೆ ಮುಖೇನಾ ನೋಟಿಸ್ ಜಾರಿ ಮಾಡಲಾಗಿರುತ್ತದೆ 2ನೇ ಎದುರುದಾರರು ವಿಳಾಸದಲ್ಲಿ ವಾಸವಿರುವುದಿಲ್ಲವೆಂಬ ಷರಾದೊಂದಿಗೆ ಅಂಚೆ ಇಲಾಖೆಯವರು ನೋಟಿಸ್ ಹಿಂದುರುಗಿಸಿದಂತೆ ದಿನಾಂಕ:24.11.2023 ರ ಪ್ರಜಾನುಡಿ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಎದುರುದಾರರಿಗೆ ಆಕ್ಷೇಪಣೆ ಮತ್ತು ಲಿಖಿತ ವಾದವನ್ನು ಮಂಡಿಸಲು ನೈಸರ್ಗಿಕ ಕಾನೂನು ಸಿದ್ಧಾಂತದಡಿ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಯಾವುದೇ ಆಕ್ಷೇಪಣೆ ಮತ್ತು ಲಿಖಿತ ವಾದವನ್ನು ಸಲ್ಲಿಸಲು ವಿಫಲರಾಗಿರುತ್ತಾರೆ.

**ಪ್ರಕರಣದಲ್ಲಿನ ಮೇಲ್ಮನವಿ, ಲಿಖಿತ ವಾದ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.**

**ವಿಶ್ಲೇಷಣೆ**

1. ಮೈಸೂರುತಾಲ್ಲೂಕು ವರುಣ ಹೋಬಳಿ, ಆಯರಹಳ್ಳಿ ಗ್ರಾಮದ ಸ.ನಂ 421/2 ರಲ್ಲಿ 1-11 ಎಕರೆ ಜಮೀನು ಪ್ರಕರಣದ ಸ್ವತ್ತಾಗಿದ್ದು ಮಹದೇವ ಬಿನ್ ಮರಿದಾಸೇಗೌಡ ರವರ ಹೆಸರಿನಲ್ಲಿ ಎಂ.ಆರ್.ನಂ:142/2006-07 ರಂತೆ ಖಾತೆ ನಮೂದಿರುತ್ತದೆ.
2. ಆರ್.ಆರ್ ಇಂಡೆಕ್ಸ್ ಮತ್ತು ಪಸಲು ಪಹಣಿಯಂತೆ ಪ್ರಶ್ನಿತ ಸ್ವತ್ತು ಜವನಾಬಿನ್ ಕಳಸ ರವರ ಹೆಸರಿನಲ್ಲಿ ಖಾತೆ ನಮೂದಿಸಲ್ಪಟ್ಟಿರುತ್ತದೆ.
3. ನೊಂದಣಿ ದಸ್ತಾವೇಜು ಸಂಖ್ಯೆ 6389/1944-45 ದಿನಾಂಕ:04.06.1945 ರಲ್ಲಿ ಮರಿಗೌಡನಹುಂಡಿ ಗ್ರಾಮದ ಪಚ್ಚೇಗೌಡನ ಮಗಳು ಕೆಂಪಮ್ಮ ರವರಿಗೆ ಜವನಾ ಬಿನ್ ಕಳಸ ರವರು ಪ್ರಶ್ನಿತ ಸ್ವತ್ತನ್ನು ರೂ 100/-ಗಳಿಗೆ 5 ವರ್ಷಗಳಿಗೆ ಭೋಗ್ಯ ಮಾಡಿದ್ದು.5ವರ್ಷಗಳ ನಂತರ ಭೋಗ್ಯವನ್ನು ತಿರುವಳಿ ಮಾಡಿಕೊಳ್ಳುವ ಹಾಗೂ ಭೋಗ್ಯ ತಿರುವಳಿಯಾಗದಿದ್ದಲ್ಲಿ ಭೋಗ್ಯ ಮುಂದುವರೆಯವುದಾಗಿ ಸದರಿ ಪತ್ರದಲ್ಲಿ ಬರೆದಿರುವುದು ಕಂಡುಬಂದಿರುತ್ತದೆ.
4. ಪ್ರಕರಣದಲ್ಲಿನ ದಿನಾಂಕ:01.01.1935 ರಿಂದ 31.12.1958 ರವರೆಗಿನ ನಮೂನೆ-15 ರ ಇ.ಸಿಯಲ್ಲಿ ಸದರಿ ಭೋಗ್ಯದ ವಿವರವು ನಮೂದಿನೊಂದಿಗೆ ಮರಿದಾಸೇಗೌಡ ರವರಿಂದ ಮುದ್ದಾಸೇಗೌಡ ರವರಿಗೆ ಸ.ನಂ 421/2 ರಲ್ಲಿ 1-11 ಎಕರೆ ಜಮೀನು ನೊಂದಣಿ ಸಂಖ್ಯೆ 4113 ರಂತೆ ಬೋಗ್ಯವಾಗಿರುವ ವಿವರವು ಸಹಾ ನಮೂದಿರುವುದು ಕಂಡುಬಂದಿರುತ್ತದೆ.
5. 1980-81 ರಿಂದ 1994-95 ನೇ ಸಾಲಿನ ವರೆಗಿನ ಕೈಬರವಣಿಗೆಯ ಪಹಣಿಯ ಕಾಲಂ 9 ರಲ್ಲಿ ಜವನಾ ಬಿನ್ ಕಳಸ ಹಾಗೂ ಪುಟ್ಟಮ್ಮ ಕೋಂ ಮರಿದಾಸೇಗೌಡ ಪವತಿ ಬದಲಾವಣೆ ಐಹೆಚ್ಆರ್:2/1980-81 ರಂತೆ ಖಾತೆಯನ್ನು ನಮೂದಿಸಿ ನಂತರ ಸಾಲಿನ ಕೈಬರವಣಿಗೆ



Scanned with OKEN Scanner

ಪಹಣಿಯಲ್ಲಿ ಪುಟ್ಟಮ ಕೋಂ ಮರಿದಾಸೇಗೌಡ ರವರ ಹೆಸರನ್ನು ಮಾತ್ರ ನಮೂದಿಸಿರುವುದು ಕಂಡುಬಂದಿರುತ್ತದೆ. ಎಂ.ಆರ್.ನಂ:142/2006-07 ರಂತೆ 2ನೇ ಎದುರುದಾರರಿಗೆ ಖಾತೆಯಾಗಿರುತ್ತದೆ.

6. ಪ್ರಕರಣದಲ್ಲಿ ಮೇಲ್ಮನವಿದಾರರು ಹಾಜರುಪಡಿಸಿರುವ ದಿನಾಂಕ:01.01.1958 ರಿಂದ 31.12.2003 ರವರೆಗಿನ ನಮೂನೆ-15 ರ ಇ.ಸಿಯಲ್ಲಿ ಕ್ರಯದ ವಹಿವಾಟು ಕಂಡುಬಂದಿರುವುದಿಲ್ಲ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಂತೆ ಪ್ರಶ್ನಿತ ಸ್ವತ್ತಿಗೆ ಸಂಬಂದಿಸಿದಂತೆ ಮೇಲ್ಮನವಿದಾರರು ಸ್ವತ್ತು ಇತರರಿಗೆ ಮಾರಾಟವಾಗಿಲ್ಲದಿರುವುದು ಮತ್ತು ಭೋಗ್ಯ ಖುಲಾಸೆಯಾಗಿಲಲದಿರುವುದು ಕಂಡುಬಂದಿಲ್ಲದಿರುವುದರಿಂದ ಮೂಲ ಖಾತೆದಾರರ ಜವನಾ ಬಿನ್ ಕಳಸ ರವರ ಹೆಸರನ್ನು ಆರ್.ಟಿ.ಸಿ ಕಾಲಂ 9 ರಲ್ಲಿ ನಮೂದಿಸಿ ಕಾಲಂ 11 ರಲ್ಲಿ ಭೋಗ್ಯದಾರರಾದ ಕೆಂಪಮ್ಮ ರವರ ಹೆಸರನ್ನು ನಮೂದಿಸಿ ನಂತರ ಜವನಾ ರವರ ವಿದಿಬದ್ಧ ವಾರಸುದಾರರಿಗೆ ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 128, 129 ರಂತೆ ಖಾತೆಗೆ ಕ್ರಮವಹಿಸಲು ತಹಸೀಲ್ದಾರ್ ಮೈಸೂರು ರವರಿಗೆ ಆದೇಶಿಸುವುದು ಸೂಕ್ತವೆಂದು ನಿರ್ಣಯಕ್ಕೆ ಬಂದು ಈ ಕೆಳಕಂಡಂತೆ ಆದೇಶಿಸಿದೆ..

**ಆದೇಶ**

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಪ್ರಶ್ನಿತ ಸ್ವತ್ತಿಗೆ ಸಂಬಂದಿಸಿದಂತೆ ಎಂ.ಆರ್.ನಂ:142/2006-07 ರ ಆದೇಶವನ್ನು ರದ್ದುಪಡಿಸಿದೆ ಪ್ರಕರಣದಲ್ಲಿನ 1ನೇ ಎದುರುದಾರರಾದ ತಹಸೀಲ್ದಾರ್ ಮೈಸೂರು ರವರಿಗೆ ಕಂಡಿಕೆಯಲ್ಲಿ ವಿವರಿಸಿರುವಂತೆ ಅಗತ್ಯ ಕ್ರಮವಹಿಸಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿದ ಪ್ರತಿಯನ್ನು ಪರಿಶೀಲಿಸಿದ ನಂತರ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ:25.01.2024ರಂದು ಘೋಷಿಸಲಾಗಿದೆ.

**ಉಪವಿಭಾಗಾಧಿಕಾರಿ**
**ಮೈಸೂರು ಉಪವಿಭಾಗ, ಮೈಸೂರು**



Scanned with OKEN Scanner